97

ಮೈಸೂರ ಗೆಜೆಟ್ಟು.

ಸಂ. XXXI. ಸರ್ಕಾರದಿಂದ ಘಾಯಿಷ್ ಆದ್ದು. [ನಂ. 34.

ಬೆಂಗಳೂರು, ಗುರುವಾರ, ಆಗಸ್ಟ್ ತಾ॥ 27, ಸ॥ 1896.

IIನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಫ್ ಜಡ್ಜೀರು ಮಗೈರೀರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ವಿದ್ಯಾಭ್ಯಾಸದ ಇಲಾಖೆ.

ಪ್ರಕಟನ ಪತ್ರಿಕೆ.

ಮೈಸೂರು ದೇಶೀ ಪರೀಕ್ಷೆಗಳು.

ಸ॥ 1896ನೇ ಇಸವಿ ಆಗಸ್ಟ್ ತಾರೀಖು 6.

(i) ಸ॥ 1897ನೇ ಇಸವಿ ಡಿಸೆಂಬರು ತಿಂಗಳು ಮೊದಲುಗೊಂಡು ಮೈಸೂರು ಲೋವರ್ ಸೆಕಂಡರೀ ಪರೀಕ್ಷಾ ದೇಶಭಾಷಾ ಪರೀಕ್ಷೆಗಳಿಗೆ ಪ್ರವೇಶಧನವು (2—8—0) ರೂಪಾಯಿಗಳಿಗೆ ಬದಲಾಗಿ (3—0—0) ರೂಪಾಯಿಗಳಂತೆ ನಿಯಮಿಸಲ್ಪಟ್ಟಿರುತ್ತೆ.

(ii) ಸ॥ 1897ನೇ ಇಸವಿ ಡಿಸೆಂಬರು ತಿಂಗಳು ಮೊದಲುಗೊಂಡು ಮೈಸೂರು ಕರ್ಣಾಟಕ ಪಂಡಿತ ಪರೀಕ್ಷೆಗೆ ಕರ್ಣಾಟಕ ಪಾಠನಕಾವ್ಯವು ಪೂರ್ತಿಯಾಗಿ ನಿಯಮಿಸಲ್ಪಟ್ಟಿರುತ್ತೆ.

ಮೈಸೂರು ಲೋವರ್ ಸೆಕಂಡರೀ ಪರೀಕ್ಷೆ.

ಸ॥ 1896ನೇ ಇಸವಿ ಆಗಸ್ಟ್ ತಾರೀಖು 14.

ಸಿ. ಬ್ಲೆಸ್ಸ; ಸಿ. ಕೆ. ಸುಬ್ಬರಾವು ಇವರುಗಳಿಂದ ರಚಿತವಾದ ವ್ಯವಸಾಯ ಶಾಸ್ತ್ರದ ಪ್ರಥಮ ಪುಸ್ತಕವು ತತ್ಕಾಲದಲ್ಲಿ ಛಾಪಿಸಲ್ಪಡುವದಿಲ್ಲವಾದ್ದರಿಂದ ಇತಃಪರ ಮತ್ತೊಂದು ಆವೃತ್ತಿ ಕೊಡುವ ವರೆವಿಗೂ ಹಾರ್ಮಾ ಸಾಹೇಬರವರಿಂದ ರಚಿಸಲ್ಪಟ್ಟ ಕನ್ನಡ ವ್ಯವಸಾಯ ಕ್ರಮ ಬೋಧಿನಿ ಎಂಬ ಪುಸ್ತಕವು ವ್ಯವಸಾಯ ಶಾಸ್ತ್ರಕ್ಕಾಗಿ ಮೈಸೂರು ಲೋವರ್ ಸೆಕಂಡರೀ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತೆ.

ಎಚ್. ಜೆ. ಛಾಛ್ಮ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.

ಇನಾಂ ಇಲಾಖೆ.

ಇಸ್ತಿಹಾರ್‌ನಾಮೆ.

ನಂಬರು 1. ತಾರೀಖು 18ನೇ ಆಗಸ್ಟ್ 1896.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ನಾಗಮಂಗಲ ತಾಲ್ಲೂಕಿನಲ್ಲಿ ಯಿರತಕ್ಕ ಚಿಲ್ಲರೆ ಇನಾಂಗಳ ಬಾಬತು (729) ಫೈನಲ್ ಟೈಟಲ್‌ಡೀಡ್ ಯಾನೆ ಕಾಯಂ ಪಟ್ಟೆಗಳು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಬಳಿಗೆ ಬಟವಾಡೆ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.